





ಮಗ: ಅಪ್ಪ, ತೋಟವನ್ನು ನನ್ನ ಹೆಸರಿಗೆ ಮಾಡಿಸಿ ಎಷ್ಟು ವರ್ಷ ಆಯಿತು.
ತಂದೆ: ಒಂದು ವರ್ಷಾತು ಯಾಕೆ?
ಮಗ: ಸುಮ್ನೆ ಕೇಳಿದೆ.
ಕೆಲ ತಿಂಗಳ ನಂತರ.
ಮಗ: ಅಪ್ಪ, ಹೊಸ ಕಾರು ತಂದೀನಿ ಬಾ...
ತಂದೆ: (ಗಾಬರಿಯಿಂದ) ಅದ್ಹೆಂಗ, ಹೇಗ್ ತಂದಿ.
ಮಗ: ಅದೆಲ್ಲ ಇರಲಿ ಆಮೇಲೆ ಹೇಳ್ತೀನಿ. ಕಾರು ಹತ್ತು, ಒಂದ್ ರೌಂಡ್ ಹೋಗಿ ಬರೋಣಾಂತ.
ತಂದೆ: ಸರಿ ಸರಿ.
ಮಗ: ಎಲ್ಲಿಗೆ ಹೋಗೋಣ...
ತಂದೆ: ನಮ್ಮ ತೋಟದ ಕಡೆಗೆ ಬಿಡು.
ಮಗ: ಅಪ್ಪ ತೋಟ ಮಾರೀನಿ...!

***

ಹೆಂಡತಿ: ಯಾಕ್ರಿ, ಒಂಥರಾ ಇದ್ದೀರಿ?
ಗಂಡ: ಯಾಕೊ, ಅರ್ಧ ತಲಿ ನೋಯ್ತಿದೆ.
ಹೆಂಡತಿ: (ಗೊಣಗುತ್ತ) ಎಷ್ಟ ತಲಿ ಐತಿ ಅಷ್ಟ ನೋಯುತ್ತೆ ಬಿಡ್ರಿ...

***

ಇಬ್ಬರು /ಕುರುಡರು ತಮ್ಮಲ್ಲಿಯೇ, ತನಗೆ ಹೆಚ್ಚು ಕಾಣುತ್ತೆ, ತನಗೆ ಹೆಚ್ಚು ಕಾಣುತ್ತೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದರು.
ಮರುದಿನ ಹೋಟೆಲ್ ರಾಜ್ ಓಪನಿಂಗ್ ಇತ್ತು. ಅದರ ಫಲಕ ಇಟ್ಟಿದ್ದರು.
ಕುರುಡ 1: ಅಲ್ಲಿಟ್ಟಾರಲ್ಲ, ಆ ಫಲಕದಲ್ಲಿ ಬರೆದ ಹೋಟೆಲ್ ಹೆಸರು ನಾ ದೂರದಿಂದಲೇ ಹೇಳ್ತೀನಿ ನೋಡು. ಅದು ಶಿವ ಹೋಟೆಲ್.
ಕುರುಡ 2: ನೀನು ಹೆಸರು ಹೇಳಬಹುದಷ್ಟೇ. ಅದನ್ನು ಬರೆದವನ ಹೆಸರು ಬೋರ್ಡ್‌ನ ಕೆಳಗೆ ಬರೆದಿದೆ. ಅದನ್ನ ನಾನು ಹೇಳ್ತೀನಿ ನೋಡು. ಅದು... ಶಂಕರ ಅಂತಿದೆ ನೋಡು.
ಹೋಟೆಲ್ ಮಾಲೀಕ: ಬರೀ ಬೋರ್ಡ್ ಇಟ್ಟಿರುವೆ. ಇನ್ನೂ ಅದರ ಮೇಲೆ ಏನೂ ಬರೆಸಿಲ್ಲ. ಅದನ್ನು ಕೇಳಿದ ಆ ಕುರುಡರಿಬ್ಬರೂ ಗಪ್ ಚುಪ್.

***







ಪತಿ: ದೇವರ ಹತ್ತಿರ ಏನು ಕೇಳಿಕೊಂಡೆ?
ಪತ್ನಿ: ಏಳೇಳು ಜನ್ಮಕ್ಕೂ ನೀವೇ ಪತಿಯಾಗಬೇಕು ಎಂದು.
ಪತಿ: ಹೌದಾ?
ಪತ್ನಿ: ನೀವು?
ಪತಿ: ನಿನ್ನ ಬೇಡಿಕೆ ಈಡೇರದಿರಲಿ ಎಂದು.
ಪತ್ನಿ: ಯಾಕ್ರಿ?
ಪತಿ: ಮತ್ತೆ ದೇವರು ಒಂದು ಸಲ ಮಾತ್ರ ವರ ಕೊಡ್ತಾನೆ ಅದಕ್ಕ.

***

ಹುಡುಗ: ನೀ ನಡೆಯುವ ಹಾದಿಯಲ್ಲಿ ಜೀವನ ಪೂರ್ತಿ ಹೂವು ಚೆಲ್ಲುವೆ.
ಹುಡುಗಿ: (ಖುಷಿಯಿಂದ) ಮತ್ತೆ?
ಹುಡುಗ: ಅರಮನೆಯ ಅರಗಿಣಿಯಂತೆ ನೋಡಿಕೊಳ್ಳುವೆ.
ಹುಡುಗಿ: ಆಮೇಲೆ?
ಹುಡುಗ: ಸದಾ ಮುತ್ತುಗರೆಯುತ್ತ, ಲಲ್ಲೆಗರೆಯುವೆ.
ಹುಡುಗಿ: ಇಷ್ಟೇನಾ?
ಹುಡುಗ: ಸುಂದರ ವನ ನಿರ್ಮಿಸಿ, ಪೂಜಿಸುವೆ.
ಹುಡುಗಿ: (ಬೇಸರದಿಂದ) ಇವು ಈಗಾಗಲೇ ಬಹಳಷ್ಟು ಹುಡುಗ್ರು ಹೇಳಿಬಿಟ್ಟಾರ, ಇವನ್ನು ಬಿಟ್ಟು ಜೀವನಕ್ಕೆ ಸಂಬಂಧಿಸಿದ್ದು ಹೇಳು?
ಹುಡುಗ: ನಂಗೊತ್ತಿಲ್ಲ, ಇವಷ್ಟೆ ಬರೆದುಕೊಟ್ಟಾರ.

***

ಶಿಕ್ಷಕ: ಎಲ್ಲ ಪುಸ್ತಕಗಳಿಗಿಂತ ಗಣಿತ ಪುಸ್ತಕ ಬಹಳ ದುಃಖಿಯಾಗಿರುತ್ತದೆ.
ವಿದ್ಯಾರ್ಥಿ: ಹೌದು ಸರ್!
ಶಿಕ್ಷಕ: ನಿನಗೆ ಹೇಗೆ ಗೊತ್ತು, ಹೌದು ಅಂತೀಯಲ್ಲ?
ವಿದ್ಯಾರ್ಥಿ: ಅದರಲ್ಲಿ ಸಮಸ್ಯೆಗಳು ಬಹಳ ಇರುತ್ತವೆ. ಬಿಡಿಸುವುದು ಕಷ್ಟ ಸರ್!

ಸಂಗ್ರಹ: ಸಿ.ಕೆ. ಗಣಪ್ಪನವರ, ಮುಂಡರಗಿ